# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು | : | ಶ್ರೀ ಮಂಜುನಾಥ್ ಭಂಡಾರಿ |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 588 |
| ಉತ್ತರಿಸಬೇಕಾದ ದಿನಾಂಕ | : | 11-07-2023 |
| ಉತ್ತರಿಸಬೇಕಾದ ಸಚಿವರು | : | ಸಹಕಾರ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಯಶಸ್ವಿನಿ ಯೋಜನೆ ಜಾರಿಯಲ್ಲಿದೆಯೆ; ಅದರ ರೂಪು ರೇಷೆಗಳೇನು; ಅರ್ಹತಾ ಮಾನದಂಡಗಳೇನು; (ಕಾರ್ಯಕ್ರಮ ನಿರ್ದೇಶನಗಳ (ಸ್ಕೀಮ್ ಗೈಡ್ ಲೈನ್ಸ್) ಸಹಿತ ಸಂಪೂರ್ಣ ವಿವರ ನೀಡುವುದು) | ರಾಜ್ಯದಲ್ಲಿ 2022-23ನೇ ಸಾಲಿನಲ್ಲಿ ಆಯವ್ಯಯದ ಭಾಷಣದಲ್ಲಿ ಪರಿಷ್ಕೃತ ಯಶಸ್ವಿನಿ ಯೋಜನೆಯನ್ನು ಘೋಷಿಸಿ ದಿನಾಂಕ:01-11-2022 ರಿಂದ ಜಾರಿಗೊಳಿಸಲಾಗಿದೆ.<br>ಇದರ ರೂಪು ರೇಷೆಗಳು; ಅರ್ಹತಾ ಮಾನದಂಡಗಳ ವಿವರ **ಅನುಬಂಧ- 1** ರಲ್ಲಿ ನೀಡಲಾಗಿದೆ. |
| ಆ) | ರಾಜ್ಯದಲ್ಲಿರುವ ಸಹಕಾರ ಸಂಘಗಳ ಎಲ್ಲಾ ಸದಸ್ಯರನ್ನು ಯಶಸ್ವಿನಿ ಯೋಜನೆಗೆ ನೋಂದಣಿ ಮಾಡಲಾಗಿದೆಯೆ; ನೋಂದಣಿಗೆ ಬಾಕಿಯಿರುವ ಸದಸ್ಯರ ಸಂಖ್ಯೆಯೆಷ್ಟು; (ವಿವರ ನೀಡುವುದು) | ದಿನಾಂಕ:01-11-2022 ರಿಂದ 31-12-2022ರವರೆಗೆ ನಿಗದಿಯಾಗಿದ್ದ ನೋಂದಣಿ ಅವಧಿಯನ್ನು ದಿನಾಂಕ: 31-03-2023 ರವರೆಗೆ ವಿಸ್ತರಿಸಿರುವುದರಿಂದ ಯೋಜನೆಯಲ್ಲಿ ನಿಗದಿ ಪಡಿಸಿದ 30.00 ಲಕ್ಷ ಸದಸ್ಯರ ಗುರಿಗೆ ಎದುರಾಗಿ 45.00 ಲಕ್ಷಕ್ಕೂ ಹೆಚ್ಚಿನ ಸದಸ್ಯರು ಯಶಸ್ವಿನಿ ಯೋಜನೆಯಲ್ಲಿ ನೋಂದಣಿಯಾಗಿ ಗುರಿ ಮೀರಿ ಸಾಧನೆಯಾಗಿರುತ್ತದೆ. ಜಿಲ್ಲಾವಾರು ನೋಂದಣಿಯಾದ ಸದಸ್ಯರ ವಿವರವನ್ನು **ಅನುಬಂಧ-2**ರಲ್ಲಿ ನೀಡಲಾಗಿದೆ. |
| ಇ) | ಯಶಸ್ವಿನಿ ಯೋಜನೆಗೆ ಸಂಬಂಧಿಸಿದಂತೆ ಆರೋಗ್ಯ ಸೇವೆ ನೀಡಲು ಅವಕಾಶವಿರುವ ಆಸ್ಪತ್ರೆಗಳಾವುವು; (ಜಿಲ್ಲಾವಾರು ಪಟ್ಟಿ ನೀಡುವುದು) | ಯಶಸ್ವಿನಿ ಯೋಜನೆಯಡಿ ಜೂನ್ 2023ರ ಅಂತ್ಯದವರೆಗೆ ರಾಜ್ಯಾದ್ಯಂತ 544 ಆಸ್ಪತ್ರೆಗಳು ನೆಟ್‌ವರ್ಕ್ ಆಸ್ಪತ್ರೆಗಳಾಗಿ ನೋಂದಾಯಿಸಿಕೊಂಡಿರುತ್ತಾರೆ. ಈ ಆಸ್ಪತ್ರೆಗಳಲ್ಲಿ ಯಶಸ್ವಿನಿ ಯೋಜನೆಯಡಿ ಸದಸ್ಯತ್ವ ಪಡೆದ ಸದಸ್ಯರಿಗೆ ನಗದು ರಹಿತ ಚಿಕಿತ್ಸೆ ಪಡೆಯಲು ಅವಕಾಶವಿರುತ್ತದೆ.<br>ಆಸ್ಪತ್ರೆಗಳ ಪಟ್ಟಿ **ಅನುಬಂಧ-3** ರಲ್ಲಿ ನೀಡಲಾಗಿದೆ. |
| ಈ) | ಕಳೆದ ಮೂರು ವರ್ಷಗಳಲ್ಲಿ ಯಶಸ್ವಿನಿ ಯೋಜನೆಯಡಿ ಈ ಆಸ್ಪತ್ರೆಗಳು ಚಿಕಿತ್ಸೆ ನೀಡಿದ ಪ್ರಕರಣಗಳೆಷ್ಟು; ಸಹಕಾರಿ ಸಂಘಗಳ ಸದಸ್ಯರಿಗೆ ಮರು ಪಾವತಿಯಾದ ಅಥವಾ ಪಡೆದ | ರಾಜ್ಯದಲ್ಲಿ ಈ ಹಿಂದೆ 2003 ರಲ್ಲಿ ಯಶಸ್ವಿನಿ ಯೋಜನೆಯನ್ನು ಪ್ರಾರಂಭಿಸಿದ್ದು, 2003-04 ರಿಂದ 2017-18ರವರೆಗೆ ಜಾರಿಯಲ್ಲಿದ್ದು, ನಂತರ ಈ ಯೋಜನೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ವರ್ಗಾವಣೆಗೊಂಡಿದ್ದು, ದಿನಾಂಕ:31-05-2018 ರಿಂದ ಈ |

| | | |
|---|---|---|
| | ಚಿಕಿತ್ಸಾ ವೆಚ್ಚ ಎಷ್ಟು; (ಜಿಲ್ಲಾವಾರು ಆಸ್ಪತ್ರೆವಾರು ವಿವರ ನೀಡುವುದು). | ಯೋಜನೆಯು ಸ್ಥಗಿತಗೊಂಡಿರುತ್ತದೆ. 2018-19, 2019-20 ಹಾಗೂ 2020-21ನೇ ಸಾಲಿನಲ್ಲಿ ಯಶಸ್ವಿನಿ ಯೋಜನೆ ಜಾರಿ ಇರುವುದಿಲ್ಲ.<br><br>ಮುಂದುವರೆದು ರಾಜ್ಯದೆಲ್ಲೆಡೆ ಸಹಕಾರಿಗಳ ಮತ್ತು ರೈತರ ನಿರಂತರ ಬೇಡಿಕೆಯನ್ವಯ ರಾಜ್ಯ ಸರ್ಕಾರವು 2022-23ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಹೊಸದಾಗಿ ಪರಿಷ್ಕೃತ ಯಶಸ್ವಿನಿ ಯೋಜನೆಯನ್ನು ಸಹಕಾರ ಸಂಘಗಳ ಸದಸ್ಯರಿಗಾಗಿ (ಗ್ರಾಮೀಣ ಮತ್ತು ನಗರ) ಘೋಷಿಸಿ, ಅದರಂತೆ ಈ ಯೋಜನೆಯನ್ನು ಸಹಕಾರ ಇಲಾಖೆಯಿಂದ ಅನುಷ್ಠಾನಗೊಳಿಸಿದೆ.<br><br>ಪರಿಷ್ಕೃತ ಯಶಸ್ವಿನಿ ಯೋಜನೆಯಡಿ ದಿ:01-11-2022 ರಿಂದ 31-03-2023ರ ಅವಧಿಯಲ್ಲಿ ಸದಸ್ಯತ್ವದ ನೋಂದಣಿಯನ್ನು ಮಾಡಲಾಗಿದೆ.<br><br>ರಾಜ್ಯಾದ್ಯಂತ ಇರುವ ನೆಟ್‌ವರ್ಕ್ ಆಸ್ಪತ್ರೆಗಳಲ್ಲಿ ಈ ಯೋಜನೆಯಡಿ ದಿನಾಂಕ:01-01-2023 ರಿಂದ ಚಿಕಿತ್ಸೆಯನ್ನು ಪ್ರಾರಂಭಿಸಲಾಗಿದೆ.<br><br>ದಿನಾಂಕ:01-01-2023 ರಿಂದ 30-06-2023ರ ಅವಧಿಯಲ್ಲಿ ಒಟ್ಟು 22,499 ರೋಗಿಗಳು 476 ನೆಟ್‌ವರ್ಕ್ ಆಸ್ಪತ್ರೆಗಳಲ್ಲಿ ರೂ.38.52 ಕೋಟಿ ಮೊತ್ತದ ಚಿಕಿತ್ಸೆಯನ್ನು ಪಡೆದಿರುತ್ತಾರೆ.<br><br>ಜಿಲ್ಲಾವಾರು ವಿವರವನ್ನು **ಅನುಬಂಧ-4**ರಲ್ಲಿ ನೀಡಲಾಗಿದೆ. |
| ಉ) | ಯಶಸ್ವಿನಿ ಯೋಜನೆಯಡಿ ಒಪ್ಪಂದ ಮಾಡಿಕೊಂಡಿರುವ ಆಸ್ಪತ್ರೆಗಳು ಯಶಸ್ವಿನಿ ಯೋಜನೆಯಡಿ ಚಿಕಿತ್ಸೆ ನೀಡಲು ನಿರಾಕರಿಸಿದ ಪ್ರಕರಣಗಳು ಎಷ್ಟು; ಈ ಕುರಿತು ದೂರುಗಳು ಬಂದಿದೆಯೆ; ಈ ಕುರಿತು ಸರ್ಕಾರ ಏನು ಕ್ರಮ ಜರುಗಿಸಿದೆ; (ನಿರಾಕರಣ ಪ್ರಕರಣವಾರು ವಿವರ ನೀಡುವುದು) | ರಾಜ್ಯದ ಕೆಲವು ನೆಟ್‌ವರ್ಕ್ ಆಸ್ಪತ್ರೆಗಳು ಪರಿಷ್ಕೃತ ಯಶಸ್ವಿನಿ ಯೋಜನೆಯಲ್ಲಿ ಅಳವಡಿಸಿಕೊಂಡಿರುವ ಚಿಕಿತ್ಸಾ ದರಗಳು ತುಂಬಾ ಕಡಿಮೆ ಇರುವುದಾಗಿ ತಿಳಿಸಿ, ಈ ಆಸ್ಪತ್ರೆಗಳ ಪ್ರಾತಿನಿಧಿಕ ಸಂಸ್ಥೆಗಳಾದ IMA, KMC ಮತ್ತು ಖಾಸಗಿ ಆಸ್ಪತ್ರೆಗಳ ಸಂಘಗಳು ಆಸ್ಪತ್ರೆಗಳ ಪರ ಸರ್ಕಾರಕ್ಕೆ, ಸಹಕಾರ ಸಂಘಗಳ ನಿಬಂಧಕರಿಗೆ ಮತ್ತು ಟ್ರಸ್ಟ್‌ಗೆ ಮನವಿಗಳನ್ನು ನೀಡಿ, ಪ್ರಾರಂಭದಲ್ಲಿ ಯೋಜನೆ ವ್ಯಾಪ್ತಿಯಿಂದ ವಿಮುಖರಾಗಿದ್ದಾರೆ. ಇದರಿಂದಾಗಿ ಗದಗ, ಮಂಡ್ಯ, ರಾಮನಗರ ಹಾಗೂ ಇತರೆ ಕೆಲವು ಜಿಲ್ಲೆಗಳಲ್ಲಿ ಸ್ವಲ್ಪ ಮಟ್ಟಿಗೆ ಅಡಚಣೆ ಆಗಿತ್ತು.<br><br>ಆಸ್ಪತ್ರೆಗಳ ಮೇಲಿನ ಆಕ್ಷೇಪಣೆಗಳನ್ನು ಸರ್ಕಾರವು ಪರಿಗಣಿಸಿ ಹಿಂದಿನ ಯಶಸ್ವಿನಿ ಯೋಜನೆಯಲ್ಲಿ ಇರುವ ಚಿಕಿತ್ಸೆ ದರಗಳು ಹೆಚ್ಚಿದ್ದಲ್ಲಿ ಆ ದರಗಳನ್ನು ಪರಿಗಣಿಸಲು ಅಥವಾ ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ದರಗಳು |

ಹೆಚ್ಚಿದ್ದಲ್ಲಿ ಆ ದರಗಳನ್ನು ಪರಿಗಣಿಸಲು ಅಂದರೆ ಯಾವ ದರ ಆಸ್ಪತ್ರೆಗಳಿಗೆ ಅನುಕೂಲ ಆಗುತ್ತದೆಯೋ ಆ ದರವನ್ನು ಪರಿಗಣಿಸಲು ಸೂಚಿಸಿ ದಿನಾಂಕ 24-01-2023 ರಂದು ಸರ್ಕಾರವು ಆದೇಶ ಹೊರಡಿಸಿರುತ್ತದೆ.

ಆದೇಶದ ಪ್ರತಿಯನ್ನು **ಅನುಬಂಧ-5ರಲ್ಲಿ** ನೀಡಲಾಗಿದೆ.

ಅದರಂತೆ ಪರಿಷ್ಕೃತ ದರಗಳು ದಿನಾಂಕ:25-01-2023 ರಿಂದ ಅನ್ವಯವಾಗುವಂತೆ ಅಳವಡಿಸಿಕೊಂಡು ಜಾರಿಗೊಳಿಸಲಾಗಿದೆ. ಇದರಿಂದ ಚಿಕಿತ್ಸಾ ದರಗಳಲ್ಲಿ ಸ್ವಲ್ಪ ಮಟ್ಟಿಗೆ ಹೆಚ್ಚಳವಾದಂತಾಗಿದ್ದು, ಯೋಜನೆಯಿಂದ ದೂರ ಸರಿದಿದ್ದ ಆಸ್ಪತ್ರೆಗಳು ಹೊಸದಾಗಿ ನೆಟ್‌ವರ್ಕ್ ಆಸ್ಪತ್ರೆಗಳಾಗಿ ಸೇರಿ ಕೊಳ್ಳಲು ಮುಂದೆ ಬಂದಿರುತ್ತವೆ.

ಊ) ದಕ್ಷಿಣಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಯಶಸ್ವಿನಿ ಯೋಜನೆಯಡಿ ಈ ಆಸ್ಪತ್ರೆಗಳು ಚಿಕಿತ್ಸೆ ನೀಡಿದ ಪ್ರಕರಣಗಳೆಷ್ಟು; ಯಶಸ್ವಿನಿ ಫಲಾನುಭವಿ ಸದಸ್ಯರಿಗೆ ಮರುಪಾವತಿಯಾದ ಅಥವಾ ಯಶಸ್ವಿನಿ ಫಲಾನುಭವಿ ಪಡೆದ ಚಿಕಿತ್ಸಾ ವೆಚ್ಚ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು)

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಯಶಸ್ವಿನಿ ನೆಟ್‌ವರ್ಕ್ ಆಸ್ಪತ್ರೆಗಳಲ್ಲಿ ಯಶಸ್ವಿನಿ ಯೋಜನೆಯಡಿ ಚಿಕಿತ್ಸೆ ನೀಡಿದ ಪ್ರಕರಣ ಹಾಗೂ ಚಿಕಿತ್ಸೆ ವೆಚ್ಚದ ತಾಲ್ಲೂಕುವಾರು ವಿವರ ಈ ಕೆಳಕಂಡಂತಿದೆ.

(ದಿನಾಂಕ:01-01-2023 ರಿಂದ 30-06-2023)

**ದಕ್ಷಿಣ ಕನ್ನಡ ಜಿಲ್ಲೆ**

| ಕ್ರ ಸಂ. | ತಾಲ್ಲೂಕು | ಆಸ್ಪತ್ರೆಗಳ ಸಂಖ್ಯೆ | ಪ್ರಕರಣಗಳ ಸಂಖ್ಯೆ | ಚಿಕಿತ್ಸೆ ಮೊತ್ತ (ರೂ.ಗಳಲ್ಲಿ) |
|---|---|---|---|---|
| 1 | ಬಂಟ್ವಾಳ | 2 | 153 | 17,19,500 |
| 2 | ಬೆಳ್ತಂಗಡಿ | 3 | 213 | 18,91,338 |
| 3 | ಮಂಗಳೂರು | 11 | 1247 | 3,72,03,957 |
| | **ಒಟ್ಟು** | **16** | **1613** | **4,08,14,795** |

**ಉಡುಪಿ ಜಿಲ್ಲೆ**

| ಕ್ರ ಸಂ. | ತಾಲ್ಲೂಕು | ಆಸ್ಪತ್ರೆಗಳ ಸಂಖ್ಯೆ | ಪ್ರಕರಣಗಳ ಸಂಖ್ಯೆ | ಚಿಕಿತ್ಸೆ ಮೊತ್ತ (ರೂ. ಗಳಲ್ಲಿ) |
|---|---|---|---|---|
| 1 | ಬಹ್ಮಾವರ | 1 | 32 | 3,50,800 |
| 2 | ಕಾರ್ಕಳ | 3 | 155 | 13,59,600 |
| 3 | ಕುಂದಾಪುರ | 4 | 199 | 33,74,250 |
| 4 | ಉಡುಪಿ | 4 | 438 | 39,90,300 |
| | **ಒಟ್ಟು** | **12** | **824** | **90,74,950** |

ಋ) ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಯಶಸ್ವಿನಿ ಯೋಜನೆಯಡಿ ಆಸ್ಪತ್ರೆಗಳು ಯಶಸ್ವಿನಿ ಯೋಜನೆಯಡಿ ಚಿಕಿತ್ಸೆ ನೀಡಲು ನಿರಾಕರಿಸಿದ ಪ್ರಕರಣಗಳಾವುವು; ನಿರಾಕರಣೆಗೆ ಅಥವಾ ಅಸಹಕಾರಕ್ಕೆ ಕಾರಣಗಳೇನು;

ಈ ಹಿಂದಿನ ಯಶಸ್ವಿನಿ ಯೋಜನೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಬಹುಬೇಡಿಕೆ ಆಸ್ಪತ್ರೆಗಳಾದ ಎ.ಜೆ. ಆಸ್ಪತ್ರೆ ಮತ್ತು ರಿಸರ್ಚ್ ಸೆಂಟರ್, ಕಸ್ತೂರಿಬಾ ವೈದ್ಯಕೀಯ ಆಸ್ಪತ್ರೆಗಳು, ಶ್ರೀ ಧರ್ಮಸ್ಥಳ ಮಂಜುನಾಥ ಆಸ್ಪತ್ರೆ, ಮಂಗಳ ಆಸ್ಪತ್ರೆ, ಪ್ರಗತಿ ಸ್ಪೆಷಾಲಿಟಿ ಆಸ್ಪತ್ರೆ ಮತ್ತು ಉಡುಪಿ ಜಿಲ್ಲೆಯ ಬಹುಬೇಡಿಕೆ ಆಸ್ಪತ್ರೆಗಳಾದ ಹೈ-ಟೆಕ್ ಮೆಡಿಕೇರ್ ಆಸ್ಪತ್ರೆ, ಕಸ್ತೂರ್‌ಬಾ

| | | |
|---|---|---|
| | ಈ ಕುರಿತು ಸರ್ಕಾರ ಜರುಗಿಸಿದ ಕ್ರಮಗಳೇನು? (ನಿರಾಕರಣ ಪ್ರಕರಣವಾರು ವಿವರ ನೀಡುವುದು) | ಆಸ್ಪತ್ರೆ, ಆದರ್ಶ ಆಸ್ಪತ್ರೆ, ಶ್ರೀ ಮಂಜುನಾಥ ಆಸ್ಪತ್ರೆ ಇನ್ನು ಮುಂತಾದ ಆಸ್ಪತ್ರೆಗಳು ಯಶಸ್ವಿನಿ ನೆಟ್‌ವರ್ಕ್ ಆಸ್ಪತ್ರೆಗಳಾಗಿ ಸೇರ್ಪಡೆಗೊಂಡಿದ್ದವು.<br><br>ಆದರೆ ಈಗಿನ ಪರಿಷ್ಕೃತ ಯಶಸ್ವಿನಿ ಯೋಜನೆಯಲ್ಲಿ ಸದರಿ ಆಸ್ಪತ್ರೆಗಳು ಯಶಸ್ವಿನಿ ಯೋಜನೆಯಡಿ ಚಿಕಿತ್ಸೆಗಳ ದರಗಳು ಕಡಿಮೆ ಇರುವುದಾಗಿ ಮತ್ತು ಹಿಂದಿನ ಯಶಸ್ವಿನಿ ಯೋಜನಾ ಅವಧಿಯಲ್ಲಿ ಚಿಕಿತ್ಸೆ ವೆಚ್ಚದ ಬಿಲ್ಲುಗಳು ಪಾವತಿಯಾಗದೆ ಬಾಕಿ ಇರುವುದಾಗಿ ಕಾರಣ ನೀಡಿ ಯಶಸ್ವಿನಿ ನೆಟ್‌ವರ್ಕ್ ಆಸ್ಪತ್ರೆಗಳಾಗಿ ಸೇರಿಕೊಳ್ಳಲು ಮುಂದೆ ಬಂದಿರುವುದಿಲ್ಲ.<br><br>ದಕ್ಷಿಣ ಕನ್ನಡ ಜಿಲ್ಲೆಯ ಎ.ಜೆ. ಆಸ್ಪತ್ರೆ ಮತ್ತುರಿಸರ್ಚ್ ಸೆಂಟರ್, ಮಂಗಳ ಆಸ್ಪತ್ರೆ, ಪ್ರಗತಿ ಸ್ಪೆಷಾಲಿಟಿ ಆಸ್ಪತ್ರೆ ಮತ್ತು ಉಡುಪಿ ಜಿಲ್ಲೆಯ ಹೈ–ಟೆಕ್ ಮೆಡಿಕೇರ್ ಆಸ್ಪತ್ರೆ ಮತ್ತು ಶ್ರೀ. ಮಂಜುನಾಥ ಆಸ್ಪತ್ರೆಯು ಪರಿಷ್ಕೃತ ಯಶಸ್ವಿನಿ ಯೋಜನೆಯಲ್ಲಿ ನೆಟ್‌ವರ್ಕ್ ಆಸ್ಪತ್ರೆಗಳಾಗಿ ಪ್ರಾರಂಭದಲ್ಲಿ ನೋಂದಣಿ ಮಾಡಿಕೊಂಡಿದ್ದರಾದರೂ ನಂತರ ಚಿಕಿತ್ಸೆ ದರ ಕಡಿಮೆ ಇರುವುದೆಂದು ತಿಳಿಸಿ ಯೋಜನೆಯಿಂದ ಹಿಂದೆ ಸರಿದಿರುತ್ತಾರೆ.<br><br>ಯಶಸ್ವಿನಿ ಚಿಕಿತ್ಸೆಗಳ ದರ ಪರಿಷ್ಕರಣೆ ಆದ ನಂತರ ಟ್ರಸ್ಟ್‌ವತಿಯಿಂದ ಎಷ್ಟೇ ಬಾರಿ ನೆಟ್‌ವರ್ಕ್ ಆಸ್ಪತ್ರೆಯಗಳನ್ನಾಗಿ ಮುಂದುವರೆಸಲು ಕೋರಿದರೂ ಸದರಿ ಆಸ್ಪತ್ರೆಗಳು ಚಿಕಿತ್ಸೆ ನೀಡಲು ಒಪ್ಪಲಿಲ್ಲದ ಕಾರಣ ಸದರಿ ಆಸ್ಪತ್ರೆಗಳನ್ನು ಯಶಸ್ವಿನಿ ಯೋಜನೆಯ ವ್ಯಾಪ್ತಿಗೆ ಒಳಪಡಿಸಲು ಸಾಧ್ಯವಾಗಿರುವುದಿಲ್ಲ.<br><br>ಆದರೆ ಉಡುಪಿ ಜಿಲ್ಲೆಯ ಆದರ್ಶ ಆಸ್ಪತ್ರೆ ಪ್ರಾರಂಭದಲ್ಲಿ ನೆಟ್‌ವರ್ಕ್ ಆಸ್ಪತ್ರೆಯಾಗಲು ನಿರಾಕರಿಸಿತ್ತಾದರೂ ದರ ಪರಿಷ್ಕರಣೆಯ ನಂತರ ಟ್ರಸ್ಟ್‌ನ ಮನವಿಯಂತೆ ಯೋಜನೆಯ ವ್ಯಾಪ್ತಿಗೆ ಒಳಪಟ್ಟಿರುತ್ತದೆ. |

**ಸಂಖ್ಯೆ: ಸಿಒ 142 ಸಿಎಲ್‌ಎಸ್ 2023**

K.N. Rajanna

(ಕೆ.ಎನ್.ರಾಜಣ್ಣ)
ಸಹಕಾರ ಸಚಿವರು

# ಅನುಬಂಧ – 1

## ರೂಪು ರೇಷೆಗಳು ಹಾಗೂ ಅರ್ಹತಾ ಮಾನದಂಡಗಳು

1. ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಯಾವುದೇ ಸಹಕಾರ ಸಂಘ ಅಥವಾ ಸಹಕಾರ ಸಂಘಗಳಿಂದ ಸಂಘಟಿಸಲ್ಪಟ್ಟಿರುವ ಸ್ವ-ಸಹಾಯ ಗುಂಪುಗಳ ಸದಸ್ಯರು ಮೂರು ತಿಂಗಳು ಪೂರ್ಣಗೊಂಡಲ್ಲಿ ಅವರ ಕುಟುಂಬವನ್ನು ಒಂದು ಘಟಕವನ್ನಾಗಿ ಪರಿಗಣಿಸಿ, ವಾರ್ಷಿಕ ವಂತಿಗೆಯನ್ನು ಪಾವತಿಸಿ ಯಶಸ್ವಿನಿ ಯೋಜನೆ ಪಡೆಯಲು ಅರ್ಹರಿರುತ್ತಾರೆ. (ಕುಟುಂಬ ಎಂದರೆ ಪ್ರಾಥಮಿಕ ಸದಸ್ಯರ **(Principal Member)** ತಂದೆ/ತಾಯಿ, ಗಂಡ/ಹೆಂಡತಿ, ಗಂಡು ಮಕ್ಕಳು ಮದುವೆಯಾಗದ ಹೆಣ್ಣು ಮಕ್ಕಳು, ಸೊಸೆಯಂದಿರು ಮತ್ತು ಮೊಮ್ಮಕ್ಕಳು ಎಂದು ಅರ್ಥೈಯಿಸುವುದು.)

2. 2022-23ನೇ ಸಾಲಿಗೆ ಈ ಯೋಜನೆಯಡಿ

   (ಎ) ಗ್ರಾಮೀಣ ಸಹಕಾರ ಸಂಘಗಳ/ಸ್ವ-ಸಹಾಯ ಗುಂಪುಗಳ ಗರಿಷ್ಠ ನಾಲ್ಕು ಸದಸ್ಯರ ಕುಟುಂಬ ಒಂದಕ್ಕೆ ವಾರ್ಷಿಕ ರೂ.500/-ಗಳ ವಂತಿಗೆ ಮತ್ತು ನಾಲ್ಕಕ್ಕಿಂತ ಹೆಚ್ಚಿನ ಸದಸ್ಯರುಳ್ಳ ಕುಟುಂಬದ ಪ್ರತಿಯೊಬ್ಬ ಹೆಚ್ಚುವರಿ ಸದಸ್ಯರಿಗೆ ರೂ.100/-ಗಳನ್ನು ಪಾವತಿಸತಕ್ಕದ್ದು,

   (ಬಿ) ಹಾಗೂ ನಗರ ಸಹಕಾರ ಸಂಘಗಳ ಗರಿಷ್ಠ ನಾಲ್ಕು ಸದಸ್ಯರ ಕುಟುಂಬ ಒಂದಕ್ಕೆ ವಾರ್ಷಿಕ ರೂ.1000/-ಗಳ ವಂತಿಗೆ ಮತ್ತು ನಾಲ್ಕಕ್ಕಿಂತ ಹೆಚ್ಚಿನ ಸದಸ್ಯರುಳ್ಳ ಕುಟುಂಬದ ಪ್ರತಿಯೊಬ್ಬ ಹೆಚ್ಚುವರಿ ಸದಸ್ಯರಿಗೆ ರೂ.200/-ಗಳನ್ನು ಪಾವತಿಸತಕ್ಕದ್ದು.

   (ಸಿ) ಅಗತ್ಯ ದಾಖಲಾತಿ ಸಮೇತ ನಿಮ್ಮ ಹತ್ತಿರದ ಸಹಕಾರಿ ಸಂಘಗಳ/ಸ್ವ-ಸಹಾಯ ಶಾಖೆಗೆ ಭೇಟಿ ಮಾಡಿ ಅರ್ಜಿ ಸಲ್ಲಿಸಬೇಕು.

   (ಡಿ) ಸದಸ್ಯರು ಕಡ್ಡಾಯವಾಗಿ ತಮ್ಮ ಮೊಬೈಲ್ ಸಂಖ್ಯೆಯನ್ನು ಒದಗಿಸತಕ್ಕದು.

   (ಇ) ಅಗತ್ಯ ದಾಖಲಾತಿ ಮಾಹಿತಿಗಳಾದ ಪಡಿತರ ಚೀಟಿ, ಪ್ರತಿಯೊಬ್ಬ ಸದಸ್ಯರ ಆಧಾರ್ ಕಾರ್ಡ್, ಪ್ರತಿಯೊಬ್ಬರ ಎರಡು ಪಾಸ್ಪೋರ್ಟ್ ಸೈಜಿನ ಫೋಟೋ ಒದಗಿಸಿ ನಿಗದಿತ ವಾರ್ಷಿಕ ವಂತಿಗೆಯನ್ನು ಪಾವತಿಸಬೇಕು.

   (ಎಫ್) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಸದಸ್ಯರಿಗೆ ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪ ಯೋಜನೆಯಡಿ ಸಹಾಯ ಧನ ನೀಡುವ ಮೂಲಕ ಅವರ ವಾರ್ಷಿಕ ಸದಸ್ಯತ್ವದ ವಂತಿಗೆಯನ್ನು ಸರ್ಕಾರವೇ ಭರಿಸುತ್ತದೆ.

   (ಜಿ) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಪ್ರತಿಯೊಬ್ಬ ಕುಟುಂಬ ಸದಸ್ಯರ **RD** ನಂಬರ್ ಇರುವ ಜಾತಿ ಪ್ರಮಾಣ ಪತ್ರ ಒದಗಿಸಬೇಕು.

   (ಹೆಚ್) ಸಹಕಾರಿ ಮೀನುಗಾರರು, ಸಹಕಾರಿ ಬೀಡಿ ಕಾರ್ಮಿಕರು ಮತ್ತು ಸಹಕಾರಿ ನೇಕಾರರು ಕೂಡ ಈ ಯೋಜನೆಯ ಸೌಲಭ್ಯ ಪಡೆಯಲು ಅರ್ಹರಿರುತ್ತಾರೆ.

3. ಮದುವೆಯಾಗಿರುವ ಹೆಣ್ಣು ಮಗಳು ಹಾಗು ಅವಳ ಮಕ್ಕಳು ಪ್ರಧಾನ ಅರ್ಜಿದಾರರಾದ ತಂದೆ/ತಾಯಿ/ಅಣ್ಣ/ತಮ್ಮ ಇವರ ಕುಟುಂಬದಲ್ಲಿಯೇ ಯಾವುದೇ ಕಾರಣಕ್ಕೆ (ವಿಧವೆ, ವಿಚ್ಛೇದನ, ಬೇರ್ಪಟ್ಟಿರುವುದು (Separated) ಇತ್ಯಾದಿ) ವಾಸವಾಗಿದ್ದರೆ ಮತ್ತು ಹೆಣ್ಣು ಮಗಳು ಮತ್ತು ಅವರ ಮಕ್ಕಳ ವಂತಿಗೆ ಪಾವತಿಸಿದ್ದರೆ ಅಂತಹ ಹೆಣ್ಣು ಮಗಳು ಮತ್ತು ಅವರ ಮಕ್ಕಳು ಈ ಯೋಜನೆ ಸೌಲಭ್ಯ ಪಡೆಯಲು ಅರ್ಹರಾಗಿರುತ್ತಾರೆ. ಅದಾಗ್ಯೂ ಪ್ರಸಕ್ತ ಸಾಲಿನ ಯೋಜನೆಯ ಅವಧಿಯಲ್ಲಿ ಮದುವೆಯಾದ ಹೆಣ್ಣು ಮಗಳು ತಂದೆ/ತಾಯಿ/ಅಣ್ಣ/ತಮ್ಮ ಇವರ ಜೊತೆ ವಾಸವಾಗಿರದೇ ಸಂಘದ ಕಾರ್ಯವ್ಯಾಪ್ತಿ ಹೊರಗೆ ವಾಸವಿದ್ದರೆ ಅಂತಹ ಸಂದರ್ಭದಲ್ಲಿ ಈ ಯೋಜನೆ ಸೌಲಭ್ಯವನ್ನು ಪಡೆಯಲು ಅರ್ಹರಾಗಿರುವುದಿಲ್ಲ. ಆದರೆ, ಅವಳೇ ಸಹಕಾರ ಸಂಘದ ಸದಸ್ಯೆಯಾಗಿ ಮೂರು ತಿಂಗಳು ಕಳೆದಿದ್ದಲ್ಲಿ ಯಶಸ್ವಿನಿ ಯೋಜನೆಯ ಸೌಲಭ್ಯ ಪಡೆಯಬಹುದಾಗಿದೆ.

4. ಸದಸ್ಯತ್ವ ನೊಂದಣಿ ಅವದಿ ಸಾಲಿನಲ್ಲಿ ಮದುವೆಯಾಗದ ಹೆಣ್ಣುಮಕ್ಕಳಿಗೆ ಪ್ರಧಾನ ಅರ್ಜಿದಾರರು ವಂತಿಗೆ ಪಾವತಿಸಿದ್ದು, ಆನಂತರ ಮದುವೆಯಾಗಿದ್ದಲ್ಲಿ ಅಂತಹ ಮದುವೆಯಾದ ಹೆಣ್ಣು ಮಗಳು ಪ್ರಸಕ್ತ ಸಾಲಿನಲ್ಲಿ ಯಶಸ್ವಿನಿ ಯೋಜನೆಯಡಿಯಲ್ಲಿ ಚಿಕಿತ್ಸೆ ಪಡೆಯಲು ಅರ್ಹರಿರುತ್ತಾರೆ.

5. ಅಣ್ಣ/ತಮ್ಮ, ಅಕ್ಕ/ತಂಗಿ, ಅತ್ತೆ/ಮಾವ ಹಾಗು ಚಿಕ್ಕಪ್ಪ/ದೊಡ್ಡಪ್ಪ ಮತ್ತು ಅವರ ಕುಟುಂಬದ ಸದಸ್ಯರು ಇತ್ಯಾದಿ ಸಂಬಂಧಿಗಳು ಈ ಯೋಜನೆಯಡಿ ಅರ್ಹರಾಗುವುದಿಲ್ಲ. ಅದಾಗ್ಯು ಒಂದು ಮನೆಯಲ್ಲಿ ಸೊಸೆ ಪ್ರಧಾನ ಅರ್ಜಿದಾರರಾಗಿದ್ದಲ್ಲಿ ಅವರ ಗಂಡನ ತಂದೆ/ತಾಯಿ ಅಂದರೆ ಅರ್ಜಿದಾರರ ಅತ್ತೆ/ಮಾವ ರವರು ಅರ್ಹ ಸದಸ್ಯರಾಗುತ್ತಾರೆ. ಆದರೆ ಅರ್ಜಿದಾರರ ತಂದೆ/ತಾಯಿಯವರನ್ನು ಸದಸ್ಯರನ್ನಾಗಿ ಸೇರಿಸಿಕೊಳ್ಳಲು ಬರುವುದಿಲ್ಲ. ಮೇಲೆ ವಿವರಿಸಿರುವಂತೆ ಅರ್ಹ ಕುಟುಂಬ ಸದಸ್ಯರನ್ನು ಹೊರತುಪಡಿಸಿ ಬೇರೆ ಯಾವುದೇ ಸದಸ್ಯರನ್ನು ಯಶಸ್ವಿನಿ ಯೋಜನೆಗೆ ಸೇರಿಸುವಂತಿಲ್ಲ. ಒಂದು ವೇಳೆ ಪ್ರಧಾನ ಅರ್ಜಿದಾರರಾಗಲಿ ಅಥವಾ ಸಹಕಾರ ಸಂಘದ ಮುಖ್ಯಕಾರ್ಯನಿರ್ವಹಣಾಧಿಕಾರಿಯಾಗಲಿ ಅರ್ಹರಲ್ಲದ ಸದಸ್ಯರನ್ನು ಕಾರ್ಡಿನಲ್ಲಿ ಸೇರಿಸಿರುವುದು ನಂತರ ಗಮನಕ್ಕೆ

ಬಂದರೆ, ಅಂತಹ ಅರ್ಹರಲ್ಲದ ಸದಸ್ಯರಿಂದ ವಂತಿಗೆ ಪಾವತಿಸಿಕೊಂಡು ಕಾರ್ಡಿನಲ್ಲಿ ಸೇರಿಸಿದ್ದರೂ ಸಹ ಅವರು ಯೋಜನೆಯ ಸೌಲಭ್ಯ ಪಡೆಯಲು ಅರ್ಹರಾಗುವುದಿಲ್ಲ, ಇಂತಹ ಪ್ರಕರಣಗಳಲ್ಲಿ ನಿಯಮಾನುಸಾರ ಕ್ರಮಜರುಗಿಸಲಾಗುವುದು.

6. ಯಶಸ್ವಿನಿ ಯೋಜನೆಯಡಿ ಈ ಮೇಲೆ ಹೇಳಿರುವ ಅರ್ಹತೆಯುಳ್ಳ ವ್ಯಕ್ತಿಗಳು ಸದಸ್ಯರಾಗಲು ಯಾವುದೇ ವಯೋಮಿತಿ ನಿರ್ಬಂಧವಿರುವುದಿಲ್ಲ.

7. ನವಜಾತ ಶಿಶುವಿನ ತಾಯಿ ಹೆಸರು ಯಶಸ್ವಿನಿ ಕಾರ್ಡ್‌ನಲ್ಲಿದ್ದರೆ 30 ದಿನಗಳವರೆಗೆ ತಾಯಿ ಹೆಸರು ಇರುವ ಯಶಸ್ವಿನಿ ಕಾರ್ಡಿನ ಆಧಾರದ ಮೇಲೆ ಈ ಯೋಜನೆಯಡಿಯಲ್ಲಿ ಬರುವ ಸೌಲಭ್ಯವನ್ನು ಪಡೆಯಬಹುದು.

8. ಸಮಾಪನಗೊಂಡಿರುವ ಸಹಕಾರ ಸಂಘಗಳ, ನಿಷ್ಕ್ರಿಯ ಸಹಕಾರ ಸಂಘಗಳ ಮತ್ತು ನೌಕರರ ಸಹಕಾರ ಸಂಘಗಳ ಸದಸ್ಯರಿಗೆ ಈ ಯೋಜನೆ ಅನ್ವಯಿಸುವುದಿಲ್ಲ.

9. ಪ್ರಧಾನ ಅರ್ಜಿದಾರರು ಮತ್ತು ಅವನ ಕುಟುಂಬದ ಯಾವುದೇ ಸದಸ್ಯನು ಸರ್ಕಾರಿ ನೌಕರರಾಗಿದ್ದಲ್ಲಿ ಅಥವಾ ಖಾಸಗಿ ಕಂಪನಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು ಮಾಸಿಕ ರೂ.30,000/- ಕ್ಕಿಂತ ಹೆಚ್ಚು ಅಥವಾ ವಾರ್ಷಿಕ ರೂ.3,60,000/- ಕ್ಕಿಂತ ಹೆಚ್ಚು ಒಟ್ಟು ವೇತನ ಪಡೆಯುತ್ತಿದ್ದಲ್ಲಿ ಈ ಯೋಜನೆಗೆ ಅರ್ಹರಿರುವುದಿಲ್ಲ. ಯಾವುದೇ ಆರೋಗ್ಯ ವಿಮಾ ಯೋಜನೆಯಡಿಯಲ್ಲಿ ಸದಸ್ಯರಾಗಿದ್ದಲ್ಲಿ ಅಂತಹವರು ಯಶಸ್ವಿನಿ ಯೋಜನೆಯಡಿ ಸದಸ್ಯನಾಗಲು ಅರ್ಹನಿರುವುದಿಲ್ಲ.

10. ಯಶಸ್ವಿನಿ ಯೋಜನೆಯಡಿ ಸದಸ್ಯರಿಗೆ ಯೂನಿಕ್ ಐಡಿ ಸಂಖ್ಯೆಯುಳ್ಳ ಪ್ಲಾಸ್ಟಿಕ್ ಕಾರ್ಡ್‌ನ್ನು ಒದಗಿಸಲಾಗುವುದು. ಸದಸ್ಯರು ಈ ಸ್ಮಾರ್ಟ್‌ಕಾರ್ಡ್‌ನ್ನು ಬಳಸಿ ನಗದು ರಹಿತ ಚಿಕಿತ್ಸೆಗಳನ್ನು ಪಡೆಯಬಹುದಾಗಿದೆ.

11. ಈ ಕೆಳಕಂಡ ಸೌಲಭ್ಯಗಳನ್ನು ಯಶಸ್ವಿನಿ ಸದಸ್ಯರಿಗೆ ಒದಗಿಸಲಾಗುವುದು.

ಎ) ಯಶಸ್ವಿನಿ ಯೋಜನೆಯಡಿಯಲ್ಲಿ ಮುಖ್ಯವಾಗಿ ಹೃದಯಕ್ಕೆ ಸಂಬಂಧಿಸಿದ ರೋಗಗಳು ಕಿವಿ, ಮೂಗು, ಗಂಟಲು ವ್ಯಾದಿಗಳು, ಕರುಳಿನ ಖಾಯಿಲೆಗಳು, ನರಗಳಿಗೆ ಸಂಬಂಧಿಸಿದ ಖಾಯಿಲೆಗಳು, ಕಣ್ಣಿನ ಖಾಯಿಲೆಗಳು, ಮೂಳೆ ರೋಗಗಳು, ಸ್ತ್ರೀಯರಿಗೆ ಸಂಬಂಧಿಸಿದ ಖಾಯಿಲೆಗಳು ಹಾಗೂ ಈ ಯೋಜನೆಯಡಿ ಇತರೆ ಅನುಸೂಚಿತ ಸಾಮಾನ್ಯ ರೋಗಿಗಳಿಗೆ ಸಂಬಂಧಿಸಿದ ಚಿಕಿತ್ಸಾ ಸೌಲಭ್ಯಗಳನ್ನು ಗುರ್ತಿಸಿದ ರಾಜ್ಯದ ಯಶಸ್ವಿನಿ ನೆಟ್‌ವರ್ಕ್ ಆಸ್ಪತ್ರೆಗಳಲ್ಲಿ ಒದಗಿಸಲಾಗುವುದು.

ಬಿ) ಪ್ರಸ್ತುತ ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಯೋಜನೆಯಲ್ಲಿ ಅಳವಡಿಸಿಕೊಂಡಿರುವ 1650 ಚಿಕಿತ್ಸೆಗಳನ್ನು ಮತ್ತು 478 ICU ಚಿಕಿತ್ಸೆಗಳೂ ಸೇರಿ ಒಟ್ಟು 2128 ಚಿಕಿತ್ಸೆಗಳನ್ನು ಯಶಸ್ವಿನಿ ಯೋಜನೆಗೆ ಅಳವಡಿಸಿಕೊಳ್ಳಲಾಗಿದೆ. ಮುಂದೆ ಯಶಸ್ವಿನಿ ಟ್ರಸ್ಟ್‌ನಲ್ಲಿ ಚರ್ಚಿಸಿ ಅಗತ್ಯತೆ ಕಂಡು ಬಂದಲ್ಲಿ ಚಿಕಿತ್ಸೆಗಳು ಮತ್ತು ದರಗಳ ಪರಿಷ್ಕರಣೆಗೆ ಕ್ರಮವಿಡಲಾಗುವುದು.

ಡಿ) ಯಶಸ್ವಿನಿ ಸದಸ್ಯರಿಗೆ ಜನರಲ್ ವಾರ್ಡ್‌ನಲ್ಲಿ ಚಿಕಿತ್ಸಾ ಸೌಲಭ್ಯ ಪಡೆಯುವಲ್ಲಿ ಅರ್ಹತೆ ಹೊಂದಿರುತ್ತಾರೆ. ರೋಗಿಗಳು ಸ್ವ ಇಚ್ಛೆಯೊಂದಿಗೆ ಉನ್ನತ ವಾರ್ಡ್ ಕೋರಿದಲ್ಲಿ Sharing 2 or 3 bed ಗೆ 15% ಮಿತಿ ಮತ್ತು Private Room ಅಥವಾ Single Bed ತೆಗೆದುಕೊಂಡಲ್ಲಿ 25% ರಷ್ಟು ಹೆಚ್ಚಳದೊಂದಿಗೆ ಉನ್ನತ ವಾರ್ಡ್ ಸೌಲಭ್ಯ ಪಡೆಯಲು ಅವಕಾಶ ಕಲ್ಪಿಸಿದೆ. ಹೆಚ್ಚುವರಿ ಮೊತ್ತವನ್ನು ರೋಗಿಗಳೇ ಭರಿಸತಕ್ಕದ್ದು. ಯಶಸ್ವಿನಿ ಯೋಜನೆಯಲ್ಲಿ ನೆಟ್‌ವರ್ಕ್ ಆಸ್ಪತ್ರೆಯಲ್ಲಿ ಒದಗಿಸಿರುವ ಚಿಕಿತ್ಸಾ ಸೌಲಭ್ಯದಲ್ಲಿ ಔಷಧಿ ವೆಚ್ಚ, ಆಸ್ಪತ್ರೆ ವೆಚ್ಚ, ಶಸ್ತ್ರಚಿಕಿತ್ಸೆಯ ವೆಚ್ಚ, ಆಪರೇಶನ್ ಥೀಯೇಟರ್ ಬಾಡಿಗೆ. ಅರೆವಳಿಕೆ ತಜ್ಞರ ಫೀ, ಸರ್ಜನ್ ಫೀ, ಕನ್ಸಲ್‌ಟೆಂಟ್ ಫೀ, ಬೆಡ್ ಚಾರ್ಜ್, ನರ್ಸ್ ಫೀ ಇತ್ಯಾದಿ ವೆಚ್ಚ ಒಳಗೊಂಡಿರುತ್ತದೆ.

ಇ) ಯಶಸ್ವಿನಿ ಯೋಜನೆಯಲ್ಲಿ ಪ್ಯಾಕೇಜಿನಲ್ಲಿ Implants ಅಗತ್ಯವಿರುವ ಕಡೆ Implants ದರವನ್ನು ಒಳಗೊಂಡಿರುತ್ತದೆ. (Ex. Knee replacement, lence in cataract surgery) ಒಂದು ವೇಳೆ ಫಲಾನುಭವಿಗಳ ಉನ್ನತ Implants ಅಥವಾ lence ಪಡೆಯಲು ಸ್ವ – ಇಚ್ಛೆಯಿಂದ ಒಪ್ಪಿಗೆ ಸೂಚಿಸಿದಲ್ಲಿ, ಅಂತಹ ಉನ್ನತ Implants ಮತ್ತು lence ಗೆ ತಗಲುವ ವ್ಯತ್ಯಾಸದ ಹೆಚ್ಚುವರಿ ಮೊತ್ತವನ್ನು ಅಂತಹ ಫಲಾನುಭವಿಗಳು ಭರಿಸಿ ಚಿಕಿತ್ಸೆಯನ್ನು ಪಡೆಯಬಹುದು.

ಎಫ್) ನೆಟ್‌ವರ್ಕ್ ಆಸ್ಪತ್ರೆಗಳಲ್ಲಿ ಯಶಸ್ವಿನಿ ಸದಸ್ಯರಿಗೆ ಹೊರ ರೋಗಿ ಚಿಕಿತ್ಸೆಗೆ (OPD) ಗರಿಷ್ಠ ರೂ.200/-ಗಳನ್ನು (ಮೂರು ತಿಂಗಳ ಅವಧಿಗೆ) ಮಿತಿ ನಿಗಧಿಪಡಿಸಿದ್ದು, ಈ ಪೈಕಿ ರೂ.100/- ಗಳನ್ನು ಯಶಸ್ವಿನಿ ಟ್ರಸ್ಟ್‌ವತಿಯಿಂದ ಪಾವತಿಸಲಾಗುವುದು.

************************

ಸಹಕಾರ ಸಂಘಗಳ [illegible]
([illegible] ಮತ್ತು [illegible])
[illegible]

| ಜಿಲ್ಲಾವಾರು ನೊಂದಣಿಯಾದ ಸದಸ್ಯರ ವಿವರ ಅನುಬಂಧ- 2 ರಲ್ಲಿ ಲಗತ್ತಿಸಿದೆ. | | |
|---|---|---|
| ಕ್ರ. ಸಂ | ಜಿಲ್ಲೆಯ ಹೆಸರು | ಒಟ್ಟು |
| 1 | ಬೆಂ.1ನೇ ವಲಯ | 49105 |
| 2 | ಬೆಂ.2ನೇ ವಲಯ | 23883 |
| 3 | ಬೆಂ.3ನೇ ವಲಯ | 57259 |
| 4 | ಬೆಂ.4ನೇ ವಲಯ | 75974 |
| 5 | ಬೆಂಗಳೂರು ಗ್ರಮಾಂತರ ಜಿಲ್ಲೆ | 106676 |
| 6 | ರಾಮನಗರ | 142555 |
| 7 | ತುಮುಕೂರು | 234014 |
| 8 | ಕೋಲಾರ | 102721 |
| 9 | ಚಿಿಕ್ಕಬಳ್ಳಾಪುರ | 83840 |
| 10 | ಚಿತ್ರದುರ್ಗ | 124789 |
| 11 | ದಾವಣಗೆರೆ | 132430 |
| 12 | ಶಿವಮೊಗ್ಗ | 233742 |
| | ಒಟ್ಟು | 1366988 |
| 13 | ಮೈಸೂರು | 200300 |
| 14 | ಚಾಮರಾಜನಗರ | 110335 |
| 15 | ಮಂಡ್ಯ | 335205 |
| 16 | ಹಾಸನ | 148984 |
| 17 | ಚಿಕ್ಕಮಗಳೂರು | 143254 |
| 18 | ಕೊಡಗು | 81251 |
| 19 | ದಕ್ಷಿಣ ಕನ್ನಡ | 234157 |
| 20 | ಉಡುಪಿ | 358624 |
| | ಒಟ್ಟು | 1612110 |
| 21 | ಬೆಳಗಾವಿ | 245910 |
| 22 | ವಿಜಯಪುರ | 111187 |
| 23 | ಬಾಗಲಕೋಟೆ | 193342 |
| 24 | ಧಾರವಾಡ | 113719 |
| 25 | ಗದಗ | 75741 |
| 26 | ಹಾವೇರಿ | 104904 |
| 27 | ಉತ್ತರ ಕನ್ನಡ | 194375 |
| | ಒಟ್ಟು | 1039178 |
| 28 | ಬಳ್ಳಾರಿ | 167384 |
| 29 | ಬೀದರ | 116007 |
| 30 | ಗುಲ್ಬರ್ಗಾ | 64850 |
| 31 | ಕೊಪ್ಪಳ | 66712 |
| 32 | ರಾಯಚೂರು | 116909 |
| 33 | ಯಾದಗಿರಿ | 30241 |
| | ಒಟ್ಟು | 562103 |
| | ಕ್ರೋಢಿಕೃತ | 4580379 |

ಅನುಬಂಧ – 3

# Network Hospital list as on date 30-06-2023

| Sl.No. | Hospital Name | Govt/Pvt | District |
|---|---|---|---|
| 1 | Arogyadhama Hospital | Pvt | Bagalkot |
| 2 | Ashirwad Hospital Bagalkot | Pvt | Bagalkot |
| 3 | Badakali Meternity & Children's Hospital | Pvt | Bagalkot |
| 4 | Banashankari Eye Hospital | Pvt | Bagalkot |
| 5 | Baragi Hospital | Pvt | Bagalkot |
| 6 | Bhavi Hospital & Research Center | Pvt | Bagalkot |
| 7 | City Hospital | Pvt | Bagalkot |
| 8 | Dhanush Hospital | Pvt | Bagalkot |
| 9 | Dhanvantari Multispeciality Hospital | Pvt | Bagalkot |
| 10 | District Hospital | Govt | Bagalkot |
| 11 | Doddannevara Hospital | Pvt | Bagalkot |
| 12 | Dr. Biradar Hospital | Pvt | Bagalkot |
| 13 | Dr. H.R. Katti Hospital | Pvt | Bagalkot |
| 14 | Dr. Kakhandi Eye Hospital | Pvt | Bagalkot |
| 15 | Dr. R.G. Karudagimath Memorial Nursing Home | Pvt | Bagalkot |
| 16 | Dr.A.R Belagali's Surgical & Maternity Home | Pvt | Bagalkot |
| 17 | Drishti Super Speciality Eye Hospital and Research Center | Pvt | Bagalkot |
| 18 | Guled Hospital | Pvt | Bagalkot |
| 19 | Hosapeti eye care center | Pvt | Bagalkot |
| 20 | Hosur Hospital | Pvt | Bagalkot |
| 21 | Kakhandki Eye Hospital | Pvt | Bagalkot |
| 22 | Kamakeri Children's & Meternity Hospital | Pvt | Bagalkot |
| 23 | Kathare Nursing Home & Multispeciality Hospital | Pvt | Bagalkot |
| 24 | Krishna Eye Hospital | Pvt | Bagalkot |
| 25 | Kubsad Hospital | Pvt | Bagalkot |
| 26 | Mahantesh Multispeciality Hospital | Pvt | Bagalkot |
| 27 | Munili Eye Care Center | Pvt | Bagalkot |
| 28 | Nadaf Nursing Home | Pvt | Bagalkot |
| 29 | Nilugal Hospital | Pvt | Bagalkot |
| 30 | Orthocare Hospital | Pvt | Bagalkot |
| 31 | Padma Hospital | Pvt | Bagalkot |
| 32 | Patil Hospital | Pvt | Bagalkot |
| 33 | Patil Ortho & Trauma Centre Ilkal | Pvt | Bagalkot |
| 34 | Sai Aadhar Orthopaedic Centre | Pvt | Bagalkot |
| 35 | Sai Leela Hospital, Mudhol | Pvt | Bagalkot |
| 36 | Saka Laparoscopy Hospital | Pvt | Bagalkot |
| 37 | Sanadi Orthopaedic Hospital | Pvt | Bagalkot |
| 38 | Sanjivini Children & Eye Hospital | Pvt | Bagalkot |
| 39 | Shree Banashankari Hospital | Pvt | Bagalkot |
| 40 | Shri Abhinav Surgical Hospital | Pvt | Bagalkot |
| 41 | Shri Krishna Hospital & Nursing Home | Pvt | Bagalkot |
| 42 | Shri Venkateshwara Hospital | Pvt | Bagalkot |
| 43 | Shrinivas Nethralaya Ilkal | Pvt | Bagalkot |
| 44 | Shrinivasa Nursing Home | Pvt | Bagalkot |
| 45 | Sri Parvatesh Hospital | Pvt | Bagalkot |
| 46 | Trishaladevi Super Speciality Eye Hospital | Pvt | Bagalkot |
| 47 | Ugran Kidney Care Hospital,Jamkhandi | Pvt | Bagalkot |
| 48 | V.K.Patil Memorial Orthopeadic & Fracture Hospital | Pvt | Bagalkot |
| 49 | Venkatesh Hospital | Pvt | Bagalkot |
| 50 | Venkateshwar Maternity & Surgical Care Center | Pvt | Bagalkot |
| 51 | Virinchi Hospital, Mahalingapur | Pvt | Bagalkot |
| 52 | Vittal Eye Hospital | Pvt | Bagalkot |
| 53 | Aakanksha Eye and Child hospital | Pvt | Belagavi |
| 54 | Adarsh Health Care | Pvt | Belagavi |
| 55 | Ajit Nursing Home | Pvt | Belagavi |
| 56 | Apoorva Multi Speciality Hospital | Pvt | Belagavi |
| 57 | Ashirwad Hospital | Pvt | Belagavi |
| 58 | Basaveshwar Hospital | Pvt | Belagavi |
| 59 | Bhate Hospital & Maternity Home | Pvt | Belagavi |
| 60 | Chidanand Patil Hospital, Kore Nagar, Chikkodi-591201 | Pvt | Belagavi |
| 61 | Diyaa Hospital | Pvt | Belagavi |

| Sl.No. | Hospital Name | Govt/Pvt | District |
|---|---|---|---|
| [illegible] | Dr. Ghodageri Nursing Home. | Pvt | Belagavi |
| 63 | Dr. Kodkany's Eye Care Centre | Pvt | Belagavi |
| 64 | Dr.Bagewadies Eye Centre | Pvt | Belagavi |
| 65 | Ganga Hospital | Pvt | Belagavi |
| 66 | J.G. Cooperative Hospital & R.Institute Ltd. | Pvt | Belagavi |
| 67 | Jayaratna Eye Hospital | Pvt | Belagavi |
| 68 | Jayaratna Maternity & Laproscopic Surgical Hospital | Pvt | Belagavi |
| 69 | Jeevan Maternity & Surgical Hospital | Pvt | Belagavi |
| 70 | K M C Hospital | Pvt | Belagavi |
| 71 | Kappalguddi Nursing Home | Pvt | Belagavi |
| 72 | Karnataka Health Institute | Pvt | Belagavi |
| 73 | KLE Centenary Charitable Hospital & Medical Research Centre | Pvt | Belagavi |
| 74 | KLE Hospital | Pvt | Belagavi |
| 75 | Metri Hospital | Pvt | Belagavi |
| 76 | Navajeevan Hospital, | Pvt | Belagavi |
| 77 | Netradarshan Super Specialty Eye Hospital | Pvt | Belagavi |
| 78 | Padma Nursing Home | Pvt | Belagavi |
| 79 | Parvati Eye Care Centre | Pvt | Belagavi |
| 80 | Patil Eye Hospital | Pvt | Belagavi |
| 81 | Patil Nursing Home | Pvt | Belagavi |
| 82 | Sadanand Omkar Bone & Joint Hospital | Pvt | Belagavi |
| 83 | Saideep Eye Hospital | Pvt | Belagavi |
| 84 | Salagare Children Eye Hospital | Pvt | Belagavi |
| 85 | Shivaveerakshi Eye Hospital & Laser Center | Pvt | Belagavi |
| 86 | Shree Nursing Home | Pvt | Belagavi |
| 87 | Shree Ortho & Trauma Centre | Pvt | Belagavi |
| 88 | Shri Daneshwari Surgical General Hospital | Pvt | Belagavi |
| 89 | shri Mallikarjun Multispeciality Hospital | Pvt | Belagavi |
| 90 | Shri. S. B. Odeyar Memorial Hospital | Pvt | Belagavi |
| 91 | Siddarth Netralaya | Pvt | Belagavi |
| 92 | Sri Sadguru Eye Hospital | Pvt | Belagavi |
| 93 | Sri Sai Hospital | Pvt | Belagavi |
| 94 | Sri Satya Sai Hospital | Pvt | Belagavi |
| 95 | Sudarshan Eye Hospital | Pvt | Belagavi |
| 96 | Sukh shanthi super speciality (S4) Hospital | Pvt | Belagavi |
| 97 | Trishuladevi Superspeciality Eye Hospital | Pvt | Belagavi |
| 98 | Vijaya Hospital | Pvt | Belagavi |
| 99 | Vijaya Ortho & Trauma Center | Pvt | Belagavi |
| 100 | Yash Hospital | Pvt | Belagavi |
| 101 | Arogyadhama Hospital - A unit of shivangouda | Pvt | Bellary |
| 102 | Ashwini Eye Hospital | Pvt | Bellary |
| 103 | City Hospital | Pvt | Bellary |
| 104 | Danamma Super Speciality Hospital | Pvt | Bellary |
| 105 | Dipali Hospital | Pvt | Bellary |
| 106 | I Drishti Eye Hospital | Pvt | Bellary |
| 107 | Jindal Sanjeevani Hospital | Pvt | Bellary |
| 108 | Life Line Hospital | Pvt | Bellary |
| 109 | Sri Pathi Nursing Home | Pvt | Bellary |
| 110 | Umakanth Eye Hospital | Pvt | Bellary |
| 111 | Vijaynagaraj Super Speciality Eye Care & Ballari Vitreo Retinal Laser Surgical Centre | Pvt | Bellary |
| 112 | Abhishek Nethradhama | Pvt | Bengaluru |
| 113 | Agarwal Eye Hospital | Pvt | Bengaluru |
| 114 | Akash Hospital | Pvt | Bengaluru |
| 115 | Ananthaksha Super speciality Eye Hospital | Pvt | Bengaluru |
| 116 | Artyem Hospital | Pvt | Bengaluru |
| 117 | Bangalore Medical College & Research Institute | Govt | Bengaluru |
| 118 | Disha Medical Services Pvt Ltd., (Drishti Eye Hospital) | Pvt | Bengaluru |
| 119 | Dr Agarwal Eye Hospital | Pvt | Bengaluru |
| 120 | Dr. Solanki Eye Hospital | Pvt | Bengaluru |
| 121 | East Point Hospital | Pvt | Bengaluru |
| 122 | G.E.F. Eye Hospital, (Charitable) | Pvt | Bengaluru |
| 123 | Institute Of Gastroenterology Sciences And Organ Transplant | Govt | Bengaluru |

| Sl.No. | Hospital Name | Govt/Pvt | District |
|---|---|---|---|
| 124 | Institute of Nephro Urology | Pvt | Bengaluru |
| 125 | Jayadeva Institute of Cardiology | Govt | Bengaluru |
| 126 | Krishna Netralaya | Pvt | Bengaluru |
| 127 | Lady Curzen and Bowring Hospital | Govt | Bengaluru |
| 128 | M.S. Ramaiah Hospital | Pvt | Bengaluru |
| 129 | MVJ Medical College and Research Hospital | Pvt | Bengaluru |
| 130 | Nethradhama Hospital | Pvt | Bengaluru |
| 131 | Nethradhama Hospital, Peenya | Pvt | Bengaluru |
| 132 | Oncoville Cancer hospital and Research Centre | Pvt | Bengaluru |
| 133 | Rajarajewari Medical College & Hospital | Pvt | Bengaluru |
| 134 | Sanjay Gandhi Orthopedic Accidental Center | Govt | Bengaluru |
| 135 | Sanjeevini Hospital | Pvt | Bengaluru |
| 136 | Saptagiri Hospital | Pvt | Bengaluru |
| 137 | Shirdi Sai Hospital Pvt Ltd | Pvt | Bengaluru |
| 138 | Shraddha eye care | Pvt | Bengaluru |
| 139 | Spine Care & Ortho Care Super Speciality Clini & RC | Pvt | Bengaluru |
| 140 | Sri Eye Care Laser And Surgical Centre | Pvt | Bengaluru |
| 141 | Sri Jayadeva Institute of Cardiovascular Sciences & Research & KC General Hospital Premeses | Govt | Bengaluru |
| 142 | Sri Lakshmi Super Speciality Hospital | Pvt | Bengaluru |
| 143 | Sri Siddhartha Institute of Medical Science Hospital & Research Centre | Pvt | Bengaluru |
| 144 | SS SPARSH HOSPITAL RR Nagar | Pvt | Bengaluru |
| 145 | Sunetra Eye Hospital | Pvt | Bengaluru |
| 146 | The Oxford Medical College Hospital and Research Centre | Pvt | Bengaluru |
| 147 | Trinity Hospital & Heart Foundation | Pvt | Bengaluru |
| 148 | Vasan Eye Care Hospital, Banaswadi (HRBR Layout) | Pvt | Bengaluru |
| 149 | Vasan Eye Care Hospital, Bommanahalli | Pvt | Bengaluru |
| 150 | Vasan Eye Care Hospital, HSR Layout | Pvt | Bengaluru |
| 151 | Vasan Eye Care Hospital, Jayanagar | Pvt | Bengaluru |
| 152 | Vasan Eye Care Hospital, Koramangala | Pvt | Bengaluru |
| 153 | Vasan Eye Care Hospital, marthahalli | Pvt | Bengaluru |
| 154 | Vasan Eye Care Hospital, R T Nagar | Pvt | Bengaluru |
| 155 | Vasan Eye Care Hospital, Rajajinagar | Pvt | Bengaluru |
| 156 | Vasan Eye Care Hospital, Rajarajewarinagar | Pvt | Bengaluru |
| 157 | Vijaya Nethralaya | Pvt | Bengaluru |
| 158 | Vittal Super Specialty Eye Hospital | Pvt | Bengaluru |
| 159 | Vydehi Institute of Medical Sciences | Pvt | Bengaluru |
| 160 | Apex Hospital | Pvt | Bidar |
| 161 | Basavajyothi Nethralya | Pvt | Bidar |
| 162 | Deshpande Nethralaya | Pvt | Bidar |
| 163 | District Hospital | Govt | Bidar |
| 164 | DR JADHAV HOSPITAL BHALKI | Pvt | Bidar |
| 165 | DR KRISHNAMURTHYS HOSPITAL &REHBA CENTER | Pvt | Bidar |
| 166 | Durgae Clinic & Fertility Centre | Pvt | Bidar |
| 167 | Gudage Hospital | Pvt | Bidar |
| 168 | Gurunanak Hospital | Pvt | Bidar |
| 169 | Gurupadappa Nagamarapalli Multi Super Speciality Co-operative Hospital & Research centre Ltd | Pvt | Bidar |
| 170 | Healing Tree Hospital | Pvt | Bidar |
| 171 | Kasturi Hospital | Pvt | Bidar |
| 172 | Megur Eye Care Center | Pvt | Bidar |
| 173 | Shree Gajanana Hospital | Pvt | Bidar |
| 174 | Shree Hospital | Pvt | Bidar |
| 175 | Siddaroad Charitable Hospital | Pvt | Bidar |
| 176 | Talwade Hospital | Pvt | Bidar |
| 177 | Vasu Hospital | Pvt | Bidar |
| 178 | Velemegna Good News Society | Pvt | Bidar |
| 179 | Basavarajendra Hospital | Pvt | Chamarajanagar |
| 180 | District Hospital | Govt | Chamarajanagar |
| 181 | JSS Hospital | Pvt | Chamarajanagar |
| 182 | VAM Hospital | Pvt | Chamarajanagar |
| 183 | Chaitanya Eye Hospital | Pvt | Chikkaballapur |
| 184 | Deccan Hospital | Pvt | Chikkaballapur |
| 185 | District Hospital | Govt | Chikkaballapur |
| 186 | Jain Mission Hospital | Pvt | Chikkaballapur |
| 187 | Jeevan Hospital | Pvt | Chikkaballapur |

| Sl.No. | Hospital Name | Govt/Pvt | District |
|---|---|---|---|
| 8 | Lakshmi Eye Hospital, Chikkaballapura | Pvt | Chikkaballapur |
| 189 | Manasa Hospital, Gouribadanur | Pvt | Chikkaballapur |
| 190 | Manjula Nethralaya | Pvt | Chikkaballapur |
| 191 | Mysore Hospital | Pvt | Chikkaballapur |
| 192 | Poorna Eye Hospital | Pvt | Chikkaballapur |
| 193 | R.S.L. Nusing Home | Pvt | Chikkaballapur |
| 194 | Soumya Eye Hospital | Pvt | Chikkaballapur |
| 195 | Sri Sai Nethralaya | Pvt | Chikkaballapur |
| 196 | Sri Sathya Sai Sarala Memorial Hospital | Pvt | Chikkaballapur |
| 197 | Adarsha Hospital | Pvt | Chikkamagaluru |
| 198 | Ashraya Hospital,Chickmagalur | Pvt | Chikkamagaluru |
| 199 | Balaji Nursisng Hospital | Pvt | Chikkamagaluru |
| 200 | Dharshan Eye Care Hospital Chickmagalur | Pvt | Chikkamagaluru |
| 201 | District Hospital | Govt | Chikkamagaluru |
| 202 | Kaveri Memorial Charitable Hospital | Pvt | Chikkamagaluru |
| 203 | KRS Multispeciality Hospital Pvt ltd | Pvt | Chikkamagaluru |
| 204 | Madhu Ortho & Trauma Centre, Kadur | Pvt | Chikkamagaluru |
| 205 | Prashamani Hospital | Pvt | Chikkamagaluru |
| 206 | Rotary Smt. Dhannidevi Sipani Eye Hospital | Pvt | Chikkamagaluru |
| 207 | Akshay Global Hospital | Pvt | Chitradurga |
| 208 | Basaveswara Medical College | Pvt | Chitradurga |
| 209 | District Hospital | Govt | Chitradurga |
| 210 | Drishti Eye Hospital | Pvt | Chitradurga |
| 211 | Dristi Dhama eye Hospital | Pvt | Chitradurga |
| 212 | Laksmi Srinivasa Nursing Home | Pvt | Chitradurga |
| 213 | Nethrajothi Eye Hospital | Pvt | Chitradurga |
| 214 | Nethralaya Eye Hospital | Pvt | Chitradurga |
| 215 | Thirumala Hospital | Pvt | Chitradurga |
| 216 | Vishwabandhu Nethralaya | Pvt | Chitradurga |
| 217 | Athena Hospital | Pvt | Dakshina Kannada |
| 218 | Benaka Health Center | Pvt | Dakshina Kannada |
| 219 | Concetta Hospital ,Dakshina Kannada | Pvt | Dakshina Kannada |
| 220 | Father Muller Charitable institutions | Pvt | Dakshina Kannada |
| 221 | Father Muller Hospital, Thumbay | Pvt | Dakshina Kannada |
| 222 | Fr LM Pinto Hospital | Pvt | Dakshina Kannada |
| 223 | Indiana Hospital & Heart Institute | Pvt | Dakshina Kannada |
| 224 | Justice K.S. Hegde Charitable Hospsital | Pvt | Dakshina Kannada |
| 225 | Kanachur Hospital & Research Center | Pvt | Dakshina Kannada |
| 226 | Omega Hospital | Pvt | Dakshina Kannada |
| 227 | Prasad Nethralaya Dakshina Kannada | Pvt | Dakshina Kannada |
| 228 | Prasad Netralaya Superspecialty Eye Hospital, Sullia | Pvt | Dakshina Kannada |
| 229 | Somayaji Hospital | Pvt | Dakshina Kannada |
| 230 | Sri Krishna Hospital | Pvt | Dakshina Kannada |
| 231 | Srinivasa Medical College, Mukka Suratkal | Pvt | Dakshina Kannada |
